

ಅವನೇ ನನಗೆ ಫ್ಲಾಸ್ಕ್ ತಂದುಕೊಟ್ಟು ಟೀ–ಕಾಫಿ ಮಾರುವ ಕೆಲಸಕ್ಕೆ ಹಚ್ಚಿದ್ದು. ನಮಾಜ್‌ಗೆ ಹೋದಾಗ ಆ ಉದ್ದನೆಯ ದಪ್ಪ ಗಡ್ಡದ ಮುಲ್ಲಾ ಖಾದರ್ ಏಯ್ ಕಲೀಲ್ ನಿನ್ನಕ್‌ಂದು ಜಾಸ್ತಿ ಆಯ್ತು. ಹಿಂಗೇ ಬೇರೆ ಜಾತಿ ಜೊತೇಗ್ ತಿರುಗ್ತಾ ಇದ್ರೆ ಫತ್ವಾ ವರಡುಸ್ಬೇಕಾಗುತ್ತೆ, ಹುಷಾರ್ ಎಂದು ವ್ಯಗ್ರ ಕಣ್ಣುಗಳಲ್ಲಿ ಅನೇಕ ಬಾರಿ ಹೇಳಿ ಕಳುಹಿಸುತ್ತಿರುತ್ತಾನೆ. ಅಕ್ಕನಿಗೆ ಹೇಳಿದರೆ ಹ್ಞೂಂ ಕಷ್ಟಕ್ಕೆ ಆಗ್ಲಿಲ್ಲ. ಸುಖಕ್ಕಾಗ್ಲಿಲ್ಲ. ಅಪ್ಪನಿಗೆ ಆ್ಯಕ್ಸಿಡೆಂಟ್ ಆದಾಗ ಕಣ್ಣಾರೇ ನೋಡಿದ್ದ ಅದೇ ಮುಲ್ಲಾನೇ ಕೋರ್ಟ್‌ನಲ್ಲಿ ಒಂದೇ ಒಂದ್ ಸಾಕ್ಷಿ ಹೇಳಿದ್ರೆ ಚೆನ್ನಾಗಿತ್ತು. ಇವತ್ತು ನಾವು ಹೆಂಗೋ ಇರ್‍ತಿದ್ವಿ ಎಂದು ನಿಟ್ಟುಸಿರು ಬಿಡುತ್ತಾಳೆ.

ಕಲೀಲ್ ಸ್ಟೇಷನ್ ತಲುಪಿದಾಗ ರೈಲು ಬರುವ ಯಾವ ಸೂಚನೆಯೂ ಸಹ ಅಲ್ಲಿನ ಯಾವ ಪ್ರಯಾಣಿಕನ ಮುಖದಲ್ಲೂ ಕಾಣಿಸುತ್ತಿರಲಿಲ್ಲ. ತೀವ್ರ ಶರತ್ಕಾಲದ ದಿನಗಳಾದ್ದರಿಂದ ಮಂಜು ದಟ್ಟವಾಗಿಯೂ, ಒಂದೊಂದೇ ಎಳೆಗಳನ್ನು ಯಾರೋ ಆಕಾಶದಿಂದ ಭೂಮಿಗೆ ನಿರಂತರವಾಗಿ ಸರದಿಯಲ್ಲಿ ಎಸೆದಂತೆ ಇಳಿಯುತ್ತಿತ್ತು. ಆ ಚಳಿಗೆ ಕೆಲವರು ಮುದುಡಿ ಕುಳಿತು ಕದ್ದುಮುಚ್ಚಿ ಬೀಡಿ, ಸಿಗರೇಟ್ ಸೇದುತ್ತಿದ್ದರು. ಇನ್ನೂ ಕೆಲ ಪ್ರಯಾಣಿಕರು ನಿದ್ದೆಯ ಜೊತೆಗೆ ಗೊರಕೆ ಸಹ ಹೊಡೆಯುತ್ತಿದ್ದರು. ಜೊತೆಗೇ ಟೀ ಮಾರುತ್ತಿದ್ದ ಇನ್ನಷ್ಟು ಕೆಲವರು ಆಗಲೇ ಬಂದು ಪ್ಲಾಟ್‌ಫಾರಂ ಛಾವಣಿಯ ಕಮಾನುಗಳ ಜಗುಲಿಯ ಮೇಲೆ ತೂಕಡಿಸುತ್ತಿದ್ದರು ಅಥವಾ ಹರಟುತ್ತಿದ್ದರು. ಕಲೀಲ್ ನೇರವಾಗಿ ಸ್ಟೇಷನ್‌ಮಾಸ್ಟರ್ ಇದ್ದ ಛೇಂಬರ್‌ಗೆ ನಡೆದ. ದೂರದಿಂದಲೇ ಕಪ್ಪನೆಯ ದಢೂತಿ ದೇಹದ ವ್ಯಕ್ತಿಯನ್ನು ನೋಡಿದ. ತಲೆಯಲ್ಲಿ ಅರ್ಧ ಹಣೆಯೇ ಇದೆ! ಬೊಕ್ಕತಲೆಯ, ಕುರುಚಲು ಗಡ್ಡದ, ದಪ್ಪನೆಯ ಜೊಂಡು ಮೀಸೆಯ ತಮಿಳು ವ್ಯಕ್ತಿ ಆ ಶಿಫ್ಟಿನ ಸ್ಟೇಷನ್ ಮಾಸ್ಟರ್. ಹತ್ತಿರ ನಡೆದ ಕಲೀಲ್ ಸ್ಟೇಷನ್‌ಮಾಸ್ಟರ್‌ಗೆ ಸಲಾಂ ಸಾಬ್ ಎಂದ. ಏನೋ ಬೇಗ್‌ನೇ ಬಂದಿದ್ದೀಯಾ? ಎಂದು ತನ್ನ ಕೈಲಿದ್ದ ವಾಚ್‌ಅನ್ನು ನೋಡಿಕೊಂಡು ಟ್ರೈನ್ ಬರೋಕೆ ಇನ್ನು ಕಾಲ್ ಗಂಟೆ ಐತೆ. ಕಾಫಿ ಕೊಡೋ ಎನ್ನುತ್ತಾ ತನ್ನ ಕೋಟ್ ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು ಅದರಿಂದ ಒಂದು ಸಿಗರೇಟ್ ಎಳೆದು ಬಾಯಿಗಿಟ್ಟುಕೊಂಡು ಬೆಂಕಿ ಹಚ್ಚಿಕೊಂಡ. ಅಷ್ಟರಲ್ಲಿ ಕಲೀಲ್ ಫ್ಲಾಸ್ಕ್‌ನ ಕಾಫಿಯನ್ನು ತನ್ನ ಜರ್ಕೀನ್ ಒಳಜೇಬಿನಲ್ಲಿದ್ದ ಪ್ಲಾಸ್ಟಿಕ್ ಲೋಟಕ್ಕೆ ಕಾಫಿ ಬಗ್ಗಿಸಿದ್ದ. ಸಿಗರೇಟ್ ಹಚ್ಚಿದ ಸ್ಟೇಷನ್‌ಮಾಸ್ಟರ್ ಕಾಫಿಯ ರುಚಿಯನ್ನು ಸವಿದು ನಿನ್ನಕ್ಕುಂದು ರುಚಿಯೋ ರುಚಿ ಎಂದು ಕಿಚಾಯಿಸಿ, ತನ್ನ ಜೊಂಡುಮೀಸೆಯ ಮರೆಯಲ್ಲಿಯೇ ನಕ್ಕಿದ್ದು ಕಣ್ಣಿಗೆ ಕಂಡರೂ ಕಲೀಲ್ ಯಾವ ಭಾವವನ್ನು ಪ್ರದರ್ಶಿಸದೇ ಸುಮ್ಮನಾದ.

ಕಲೀಲ್ ತನ್ನ ಪ್ಯಾಂಟ್ ಜೇಬಿನಲ್ಲಿದ್ದ ಐದುನೂರು ರೂಪಾಯಿಯನ್ನು ಹೊರತೆಗೆದು ಅದರಲ್ಲಿದ್ದ ಗಾಂಧಿ ತಾತನ ಮೇಲೂ, ದೊಡ್ಡದಾಗಿ 500 ಎಂದು ಪ್ರಿಂಟ್ ಆಗಿದ್ದ ನಂಬರಿನ ಮೇಲೂ ತನ್ನ ಕೈನ ಎಲ್ಲಾ ಬೆರಳುಗಳಲ್ಲಿಯೂ ಸವರಿದ. ಈ ಚಳಿಯಲ್ಲೂ ಕೂಡ ಅದನ್ನು ಕೊಟ್ಟಿದ್ದ ಜುಬೇದಾಳ ಬಿಸಿಯಿನ್ನೂ ಹಾಗೇ ಇದೆಯೇನೋ ಅನ್ನಿಸುವಂತೆ ನಗುವ ಗಾಂಧಿಯ ಜೊತೆಗೆ ಬೆಚ್ಚಗಿತ್ತು.

ಐದುನೂರು ರೂಪಾಯಿಗಳಲ್ಲಿ ಒಂದು ಒಳ್ಳೆಯ ಜುಬ್ಬಾ ತಗೆದುಕೊಳ್ಳಬೇಕು. ಕಳೆದ ತಿಂಗಳು ಟ್ಯಾನರೀ ರೋಡ್‌ನ ಹುಡುಗರೊಂದಿಗೆ ಕ್ರಿಕೆಟ್ ಆಟ ಆಡೋವಾಗ ಹರಿದೋಗಿದೆ. ನಮಾಜ್ ಹೋಗೋಕೆ ಒಂದೂ ಒಳ್ಳೆ ಜುಬ್ಬಾ ಇಲ್ಲ. ಇವತ್ತು ಬೇಗ ಟೀ–ಕಾಫಿ ಖಾಲಿ ಮಾಡಿ ಶಿವಾಜಿನಗರ್ ಚರ್ಚ್ ಪಕ್ಕದಲ್ಲಿರೋ ಸ್ಟಾರ್ ರೆಡಿ ಗಾರ್ಮೆಂಟ್ಸ್‌ನಲ್ಲೇ ಬಟ್ಟೆ ತೆಗೀಬೇಕು. ಶಬ್ಬೀರ್ ಅಲ್ಲೇ ತನ್ನ ತಾತನ ತಿಥಿಗೆ ಬಟ್ಟೆ ತೆಗೆದಿದ್ದು. ವಾಹ್! ಹೆಂಗಿತ್ತದು. ನೀಲಿ ಬಣ್ಣದ ಜುಬ್ಬಾದಲ್ಲಿ ಗೋಲ್ಡ್ ಕಲರ್ ಚಿಟ್ಟೆಗಳು. ಶಬ್ಬೀರ್ ಕೆಂಪಗಿದ್ದದ್ದಕ್ಕೂ ಆ ಜುಬ್ಬಕ್ಕೂ ಒಳ್ಳೇ ಮ್ಯಾಚಿಂಗ್.

ಶಬ್ಬೀರ್‌ನ ತಾತನ ತಿಥಿ ಎಂದೊಡನೇ ಅವನಿಗೆ ಥರಾವರಿ ಮಾಂಸದ ಅಡುಗೆ ಊಟಗಳು ನೆನಪಿಗೆ ಬಂದವು.

ಬಡಿಸುವವರು, ನಾಯಿಗಳಾ ಎರಡೆರಡು ಸಾರಿ ಬರ್‍ತೀರ ಎಂದು ಗದರಿಸಿದ್ದರೂ ನಾನು ಮಾತ್ರ ಮೂರು ಸಾರಿ ತಿಂದಿದ್ದೆ. ಅವನ ತಾತ ಮಾಂಸ ತಿನ್ನುವುದನ್ನು ಚಿಕ್ಕ ವಯಸ್ಸಿನಲ್ಲೇ ಬಿಟ್ಟಿದ್ದರಂತೆ. ಗಾಂಧೀಜೀ ಕಾಲದಲ್ಲಿ ಅವರಿನ್ನೂ ಹುಡುಗರಾಗಿದ್ದರಂತೆ. ಆ ವಯಸ್ಸಿನಲ್ಲೇ ಅವರು ಟಾಂಗಾ ಗಾಡಿಯಲ್ಲಿ ಉಪ್ಪು ಮಾರಿಕೊಂಡು ಜೀವಿಸುತ್ತಿದ್ದರೂ, ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕು ಅಂತೆಲ್ಲಾ ಹೋರಾಡಿ ಜೈಲಿಗೂ ಹೋಗಿದ್ದರಂತೆ. ಸ್ವಾತಂತ್ರ್ಯ ಸಿಕ್ಕಿ ಭಾರತ ಇಬ್ಭಾಗವಾದಾಗ ಇಲ್ಲಿ ಬದುಕಿ ಬಾಳಿದ ನಮಗೆ ಭಾರತವೇ ನಮಗೆ ಸುರಕ್ಷಿತ ರಾಷ್ಟ್ರ. ಸುಮ್ಮನೇ ಗಲಾಟೆ ಬೇಡ. ಗಾಂಧೀಜೀ, ನೆಹರು ಅವರ ಮಾತು ಕೇಳಿ. ದಯವಿಟ್ಟು ಹಿಂಸೆ ಮಾಡೋದು ಬೇಡ. ನಾವು ಹಿಂದೂಗಳ ಒಂದು ಮನೆ ಸುಟ್ಟರೆ ಅವರು ನಮ್ಮ ನೂರು ಮನೆ ಸುಡುತ್ತಾರೆ. ಇಲ್ಲೇ ಇರೋಣ. ಎರಡು ದಿನಾ ಆದ್ರೆ ಎಲ್ಲಾ ಸರಿ ಹೋಗುತ್ತೆ ಎಂದು ನಮ್ಮ ಮುಸ್ಲಿಂ ಕಾಲೋನಿಯ ಎಲ್ಲರನ್ನು ಸಮಾಧಾನ ಗೊಳಿಸಿದ್ದರಂತೆ. ಅವರ ಮಾತು ಕೇಳದೇ ಜಿನ್ನಾನ ಪರಮ ಭಕ್ತನಾಗಿದ್ದ ಅವರ ಅಣ್ಣ ಪಾಕಿಸ್ತಾನಕ್ಕೆ ಹೋದಾಗ ಅವನ ಮನೆಯನ್ನು ಅವರೇ ಖುದ್ದಾಗಿ ಸರ್ಕಾರದ ವಶಕ್ಕೆ ಕೊಟ್ಟರಂತೆ. ಅವರ ಮನೆಯ ಗೋಡೆ ತುಂಬೆಲ್ಲಾ ಗಾಂಧೀಜಿ, ನೆಹರೂ ಫೋಟೋಗಳೇ. ಅವರು ಯಾವುದೇ ಹಬ್ಬದಲ್ಲಾದರೂ ಸರಿ ನಮಗೆಲ್ಲಾ ಚಾಕ್‌ಲೇಟ್ ಕೊಟ್ಟು ಸ್ವಾತಂತ್ರ್ಯ ಸಿಕ್ಕ ಕತೆ ಹೇಳುತ್ತಿದ್ದರು. ಬಡವರಾಗಿದ್ದ ನನ್ನ ಅಪ್ಪನಿಗೆ ಚಂದಾ ಎತ್ತಿ ಕಾರು ಕೊಡಿಸಿದ್ದು ಅವರೇ ಎಂದು ಅಕ್ಕ ಯಾವಾಗಲೂ ಹೇಳುತ್ತಿರುತ್ತಾಳೆ. ಅವರ ಕಡೇ ತಮ್ಮನೇ ನಾನು ನಮಾಜ್‌ಗೆ ಹೋಗೋ ಮಸೀದಿಯಲ್ಲಿ ಯಾವಾಗಲೂ ಅಕ್ಕನಿಗೆ ಎಚ್ಚರಿಕೆ ಕೊಡುವ ಮುಲ್ಲಾ.

ಕಲೀಲ್ ಇಷ್ಟೆಲ್ಲಾ ಯೋಚಿಸುತ್ತಿರುವ ಹೊತ್ತಿಗೆ ಅದೇ ಶಬ್ಬೀರ್ ಮತ್ತವನ ಗ್ಯಾಂಗ್ ಲೋಕಾಭಿರಾಮವಾಗಿ ಮಾತನಾಡಿಕೊಳ್ಳುತ್ತಾ ಬರುತ್ತಿದ್ದರು. ಬಂದವರೇ ಕ್ಯಾ ಕಲೀಲ್ ಎಂದು ಅವನ ಫ್ಲಾಸ್ಕ್‌ನಿಂದಲೇ ಅಲ್ಲೇ ಇದ್ದ ಪ್ಲಾಸ್ಟಿಕ್ ಲೋಟಕ್ಕೆ ಟೀ ಬಗ್ಗಿಸಿಕೊಂಡು ಕುಡಿಯತೊಡಗಿದರು. ಇದು ದಿನವೂ ನಡೆಯುವ ಕ್ರಿಯೆಯಾಗಿದ್ದರಿಂದ ಕಲೀಲ್ ಯಾವುದೇ ಬೇಜಾರಿನ ಮುಖ ತೋರಿಸದೇ ಶಬ್ಬೀರ್ ಅದೇ ನಿನ್ ತಾತನ ತಿಥೀನಲ್ಲಿ ತಗಂಡಿದ್ದಲ್ಲಾ ಗೋಲ್ಡ್ ಬಟರ್‌ಫ್ಲೈ ನ ನೀಲಿ ಜುಬ್ಬಾ. ಎಷ್ಟದು? ಎಂದ. ತನ್ನ ಬೆಕ್ಕಿನ ಕಣ್ಣುಗಳನ್ನು ಕಿರಿದುಗೊಳಿಸುತ್ತಾ ಶಬ್ಬೀರ್ ಎಂಟುನೂರು. ಯಾಕೆ? ಕ್ಯಾ ಕಿಸ್ಸಾ? ಎಂದ. ಅದಕ್ಕೆ ಕಲೀಲ್ ಇವತ್ತು ನಮ್ಮಕ್ಕ ಐದುನೂರು ರೂಪಾಯಿ ಕೊಟ್ಳು. ಒಂದು ಜುಬ್ಬಾ ತಗಳನಾ ಅಂದ್ಕೊಂಡೆ ಎಂದು, ಮತ್ತೆ ಅದೇ ಬೇಜಾರಿನ ದನಿಯಲ್ಲಿ ಆ ಅಂಗ್ಡೀಲಿ ಕಮ್ಮೀಗೂ ಬಟ್ಟೆ ಸಿಗ್ತದಾ? ಎಂದ.

ಅಷ್ಟರಲ್ಲಿ ಆ ಸ್ಟೇಷನ್‌ನ ಪ್ರಯಾಣಿಕರೆಲ್ಲರೂ ಗಡಿಬಿಡಿಗೊಂಡವರಂತೆ ಏಳಲು ಶುರು ಮಾಡಿದ್ದರು. ಸ್ಟೇಷನ್ ಮಾಸ್ಟರ್ ಭಾರವಾದ ಹೊಟ್ಟೆಯೊಡನೆ, ಎದ್ದ ಮುಖದಲ್ಲಿ ಪ್ಲಾಟ್‌ಫಾರಂನ ಅಂಚಿಗೆ ಬಂದು ನಿಂತಿದ್ದ. ಕೈಯ್ಯಲ್ಲಿ ಹಸಿರು ಬಾವುಟವನ್ನು ಮಡಚಿಕೊಂಡು, ಕೆಂಪು ಬಾವುಟವನ್ನು ಬಿಚ್ಚಿಕೊಂಡು ರೈಲಿಗೆ ತೋರಿಸುತ್ತಾ ಬೀಸುತ್ತಿದ್ದ. ದೂರದಲ್ಲಿ ಬರುತ್ತಿದ್ದ ರೈಲು ಕ್ರಮೇಣ ವೇಗ ತಗ್ಗಿಸಿಕೊಂಡು ಹತ್ತಿರವಾಯಿತು. ಮ್ಯಾರಾಥಾನ್ ಅಥವಾ ಗುಡ್ಡಗಾಡು ಓಟದ ಓಟಗಾರರು ಮಧ್ಯೆ ಮಧ್ಯೆ ಕೋಕೋ ಕುಡಿಯಲು ನಿಂತವರಂತೆ ನಿಂತುಕೊಂಡಿತು. ಐದು ನಿಮಿಷ ನಿಂತ ರೈಲು ಕೆಲವರನ್ನು ಆಚೆ ದಬ್ಬಿ, ಬೇಕಾದವರನ್ನು ಒಳಗೆಳೆದುಕೊಂಡು, ಸಾಕಾಗುವಷ್ಟು ಟೀ, ಕಾಫಿ ಹೀರಿಕೊಂಡು, ಸ್ಟೇಷನ್ ಮಾಸ್ಟರ್ ಕೆಂಪು ಬಾವುಟ ತೋರಿಸಿದ್ದೇ ತಡ ರಾಕ್ಷಸನ ಹಾಗೆ ಅಬ್ಬರಿಸುತ್ತಾ, ಕೂಗಿಕೊಂಡು ಮುನ್ನಡೆದು ಸೂರ್ಯನ ಬೆಳಕಿನಿಂದ ದೂರ ಓಡುವವನಂತೆ ಕತ್ತಲಲ್ಲಿ ಮರೆಯಾಯಿತು.

ಇತ್ತ ಶಬ್ಬೀರ್ ಗ್ಯಾಂಗ್ ಸಹ ಕತ್ತಲಲ್ಲೇ ಕಣ್ಮರೆಯಾಗಿತ್ತು; ಅವರು ರೈಲಿನಲ್ಲಿ ಹೋದರೋ ಅಥವಾ ಆಚೆ ಹೋದರೋ ತಿಳಿಯಲಿಲ್ಲ.

ರೈಲಿನ ಆ ಹೊತ್ತಿನ ವ್ಯವಹಾರ ಮುಗಿಯುವಷ್ಟರಲ್ಲಿ ಶಬ್ಬೀರ್‌ನ ಗ್ಯಾಂಗ್ ಕಲೀಲ್‌ನ ಐದುನೂರು ರೂಪಾಯಿಯನ್ನು ಎಗರಿಸಿ ಮಾಯವಾಗಿತ್ತು. ಕಲೀಲ್‌ಗೆ ಅಕ್ಕ ಕೊಟ್ಟಿದ್ದ ಬಿಸಿಯಾದ ನೋಟಿನ ಜಾಗದಲ್ಲಿ ಶರತ್ಕಾಲದ ದಟ್ಟ ಮಂಜು ಬಂದು ಕುಳಿತ ಹಾಗೆ ಅನ್ನಿಸುವುದಕ್ಕೆ ಶುರುವಾಗಿತ್ತು. ರೈಲ್ವೇ ಸ್ಟೇಷನ್, ಸ್ಟೇಷನ್ ಮಾಸ್ಟರ್, ಪ್ರಯಾಣಿಕರು, ರೈಲು, ಶಬ್ಬೀರ್, ಶಬ್ಬೀರ್‌ನ ತಾತನ ಮನೆಯಲ್ಲಿ ಹಾಗೂ ಅಕ್ಕ ಕೊಡುತ್ತಿದ್ದ ಹಣದಲ್ಲಷ್ಟೇ ಕಾಣಿಸುತ್ತಿದ್ದ ಗಾಂಧಿ, ಅಕ್ಕ, ಡಿಸೋಜಾ, ಕಡೆಗೆ ತಾನೂ ಕೂಡ ಅದೇ ಮಂಜಿನ ತೆರೆಗಳಲ್ಲಿ ಬೆರೆತಂತೆ... ಬೆರೆಯದಂತೆ ದ್ವಂದ್ವವಾಗಿ ಅವನ ಕಣ್ಣುಗಳಿಗೆ ಕಂಡೂ ಕಾಣದಂತೆ ಇದ್ದವು.

■